# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹದೇವಪುರ ವಲಯ, ಬೆಂಗಳೂರು.

ದಿನಾಂಕ: 04/01/2017

ಸಂಖ್ಯೆ: ಬಿಬಿಎಂಪಿ/ನಯೋ/ಮವ/44/2016-17

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಗರ ಯೋಜನೆ ಮಹದೇವಪುರ ವಲಯ ★ ಬೆಂಗಳೂರು-560 048 ★

## 'ಪ್ರಾರಂಭಿಕ ಪ್ರಮಾಣ ಪತ್ರ'

ವಿಷಯ:- ಸಂಖ್ಯೆ: ಬಿಬಿಎಂಪಿ/ಮವ/ನಯೋ/ಎಲ್.ಪಿ/145/2016-17 ದಿ:29/11/2016 ರಂದು ನಕ್ಷೆ ಪರವಾನಿಗೆ ಪಡೆದಿರುವ ವಸತಿ ಸಮುಚ್ಚಯ ಕಟ್ಟಡ ನಿರ್ಮಾಣವನ್ನು ಮುಂದುವರೆಸಲು ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

ಉಲ್ಲೇಖ:- ತಮ್ಮ ಮನವಿ ಪತ್ರದ ದಿನಾಂಕ:27/12/2016.

*****

ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್.ಪುರ ಹೋಬಳಿ ಪಣತ್ತೂರು ಗ್ರಾಮದ ಸರ್ವೆ ನಂ.14, 15/1, 15/2 ಖಾತಾ ಸಂಖ್ಯೆ.2102 ಮುನಿಸಿಪಲ್ ನಂ.161 ರ ಆಸ್ತಿಯನ್ನು ದಿನಾಂಕ:29/12/2016 ರಂದು ಸಹಾಯಕ ನಿರ್ದೇಶಕರು, ನಗರ ಯೋಜನೆ ಮಹದೇವಪುರ ವಲಯ ರವರು ಸಹಾಯಕ ಅಭಿಯಂತರರೊಡನೆ ಪರಿವೀಕ್ಷಣೆ ಮಾಡಲಾಗಿ ತಳ ಅಂತಸ್ತಿನಲ್ಲಿ ನಿರ್ಮಿಸಿರುವ ಸ್ಥಂಭಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಎಲ್.ಪಿ.ಸಂಖ್ಯೆ.Ad.Com/MDP/0145/16-17 (ಬಿಬಿಎಂಪಿ/ ಮವ/ನಯೋ/ಎಲ್.ಪಿ/131/2016-17 ದಿನಾಂಕ:29/11/2016) ರಂದು ಮಂಜೂರಾಗಿರುವ ನಕ್ಷೆಗೆ ಹೋಲಿಕೆ ಮಾಡಲಾಗಿ ಈ ನಡುಜಾಗಗಳು ಮಂಜೂರಾತಿ ನೀಡಿರುವ ನಕ್ಷೆಯಂತೆ ಬೈಲಾ ಪ್ರಕಾರ ಇರುವುದು ಕಂಡುಬಂದಿದೆ. ಪ್ರಾರಂಭಿಕ ಪ್ರಮಾಣ ಪತ್ರ ಪಡೆಯಲು ಪಾವತಿಸಬೇಕಾದ ಶುಲ್ಕ ರೂ.1,47,400/- ಗಳನ್ನು ಪಾವತಿಸಲು ತಿಳಿಸಿದ್ದು, ತಾವು ರೂ.1,47,400/- ಡಿ.ಡಿ.ಸಂಖ್ಯೆ:063414 ದಿ:02/01/2017 ರಲ್ಲಿ ಪಡೆದಿರುವ ಡಿ.ಡಿ.ಗಳನ್ನು ದಿನಾಂಕ:04/01/2017 ರಲ್ಲಿ ಈ ಕಛೇರಿಗೆ ಸಲ್ಲಿಸಿದ್ದು, ಸದರಿ ಮೊತ್ತವನ್ನು ದಿನಾಂಕ:04/01/2017 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೊಕ್ಕಸಕ್ಕೆ ಪಾವತಿಸಲಾಗಿದೆ.

ಆದ್ದರಿಂದ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಕಾಮಗಾರಿಯನ್ನು ಮುಂದುವರಿಸಲು ಈ ಮೂಲಕ ಅನುಮೋದನೆ ನೀಡಲಾಗಿದೆ.

1) ಯಾವುದೇ ಬದಲಾವಣೆಗಳನ್ನಾಗಲೀ, ಮಾರ್ಪಾಡುಗಳನ್ನಾಗಲೀ ಅಥವಾ ಉಲ್ಲಂಘನೆಗಳನ್ನಾಗಲೀ ಮಾಡದೆ ಕಟ್ಟುನಿಟ್ಟಾಗಿ ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರವೇ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದು.

2) ಕಾಮಗಾರಿಯು, ಅಡಿಪಾಯದ ಅಥವಾ ಸ್ಥಂಭಗಳ ಆಧಾರ ಅಥವಾ ಸ್ಥಂಭಗಳ ಸ್ಥಿರೀಕರಣ ಕಾರ್ಯವು ಪೂರ್ಣಗೊಂಡ ಹಂತವನ್ನು ತಲುಪಿದಾಗ ನಿರ್ಮಾಣವನ್ನು ಮಂಜೂರಾತಿ ನೀಡಿರುವ ನಕ್ಷೆಯ ಮತ್ತು ಕಟ್ಟಡ ಉಪವಿಧಿಗಳ ಪ್ರಕಾರ ಕೈಗೊಂಡಿರುವ ಬಗ್ಗೆ ಕಾಮಗಾರಿಯನ್ನು ಪರಿವೀಕ್ಷಣೆ ಮತ್ತು ಶೋಧನೆ ಮಾಡಲು ನೆರವು ನೀಡುವ ದೃಷ್ಟಿಯಿಂದ ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಕಟ್ಟಡ ಪೂರ್ಣಗೊಂಡ ನಂತರ ಸ್ವಾಧೀನಾನುಭವ ಪತ್ರವನ್ನು ಪಡೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಂದೇಶವನ್ನು ಕಳುಹಿಸತಕ್ಕದ್ದು ಹಾಗೂ ಸ್ವಾಧೀನಾನುಭವ ಪತ್ರವನ್ನು ಪಡೆಯುವುದು.

3) ಕಾಲಕಾಲಕ್ಕೆ ಸಂದರ್ಭಾನುಸಾರ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು ಹಾಗೂ ಮಂಜೂರಾತಿ ಸಮಯದಲ್ಲಿ ನೀಡಿರುವ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

D. K. madhu... 4/1/17

ಸಹಾಯಕ ನಿರ್ದೇಶಕರು ನಗರ ಯೋಜನೆ
ಬೃ.ಬೆಂ.ಮಹಾನಗರ ಪಾಲಿಕೆ

ಸಹಾಯಕ ನಿರ್ದೇಶಕರು
ನಗರ ಯೋಜನೆ
ಮಹದೇವಪುರ ವಲಯ
ಬಿ.ಬಿ.ಎಂ.ಪಿ., ಬೆಂಗಳೂರು.
4/1/17

ರವರಿಗೆ,

M/s Disha Dwellings Pvt ltd,
Rep by Sri Rajasekhar Kamisetty &
Sri Gunaranjan Jonnagaddala
Khatha No.2102, Survey No.14, 15/1, 15/2,
Municipal No.161, Panathur Village
Bangalore.